ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪ ವಿಭಾಗ,
ಮಡಿಕೇರಿ

ದೂ. ಸಂ : 08272-298650
ಇ-ಮೇಲ್ : mi.kodagu@gmail.com

---

ಸಂ/ಸಸಮ/ಸ.ಇಂ./ಕೂ.ಏ.ನೀ./2023/ 146 ದಿನಾಂಕ: 18/3/23

ರವರಿಗೆ,

ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ
ಅಭಿವೃದ್ಧಿ ವಿಭಾಗ,
ಮಂಗಳೂರು.

ಮಾನ್ಯರೆ,

AEE (El.) esco Kushalnagar Office F.No 1892 27/3/23

ವಿಷಯ : ಕುಶಾಲನಗರ ತಾಲೂಕಿನ ಕೂಡುಮಂಗಳೂರು ಏತ ನೀರಾವರಿ ಯೋಜನೆಯ ವಿದ್ಯುತ್ ಬಿಲ್ಲುಗಳನ್ನು ಪಾವತಿಸುವ ಬಗ್ಗೆ.

ಉಲ್ಲೇಖ: 1) ಈ ಕಛೇರಿ ಪತ್ರ ಸಂ:ಸಸಮ/ಸ.ಇಂ./ಕೂ.ಏ.ನೀ./2023/72, ದಿನಾಂಕ:02-02-2023.

2) ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ಉಪ ವಿಭಾಗ, ಚಾ.ವಿ.ಸ.ನಿ.ನಿ., ಕುಶಾಲನಗರ ರವರ ಪತ್ರ ಸಂ:ಸಕಾನಿಇಂ/ ಹಿ.ಸ./ಕು.ನ./2022-23/4493, ದಿನಾಂಕ:17-03-2023.

****

ವಿಷಯಕ್ಕೆ ಸಂಬಂಧಪಟ್ಟಂತೆ, ಕುಶಾಲನಗರ ತಾಲೂಕಿನ ಕೂಡುಮಂಗಳೂರು ಏತ ನೀರಾವರಿ ಯೋಜನೆಯನ್ನು ಪುನರುಜ್ಜೀವನಗೊಳಿಸಲಾಗಿದ್ದು, ಹೊಸ ಆರ್.ಆರ್. ನಂಬರ್‌ನಲ್ಲಿ ವಿದ್ಯುತ್ ಸಂಪರ್ಕವನ್ನು ಪಡೆದುಕೊಳ್ಳಲಾಗಿದೆ. ಈ ಮೊದಲು ಸದರಿ ಏತ ನೀರಾವರಿಗಾಗಿ ಪಡೆದಿದ್ದ ವಿದ್ಯುತ್ ಸಂಪರ್ಕದ ಆರ್.ಆರ್.ನಂ. 154 ಮತ್ತು 155 ಗಳ ಸಂಪರ್ಕವನ್ನು ಶಾಶ್ವತವಾಗಿ ಸ್ಥಗಿತಗೊಳಿಸುವಂತೆ ಉಲ್ಲೇಖ(1)ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಚೆಸ್ಕಾಂ ಉಪ ವಿಭಾಗ, ಕುಶಾಲನಗರ ಇವರನ್ನು ಕೋರಲಾಗಿತ್ತು. ಆದರೆ ಸದರಿ ಆರ್.ಆರ್. ನಂಬರ್‌ಗಳ ಬಾಕಿ ಇರುವ ಬಿಲ್ಲನ್ನು ಪೂರ್ತಿಯಾಗಿ ಪಾವತಿಸಿದಲ್ಲಿ ಮಾತ್ರ ವಿದ್ಯುತ್ ಸಂಪರ್ಕವನ್ನು ಶಾಶ್ವತವಾಗಿ ಸ್ಥಗಿತಗೊಳಿಸಲಾಗುವುದೆಂದು ಮೌಖಿಕವಾಗಿ ತಿಳಿಸಿರುತ್ತಾರೆ.

ಮುಂದುವರೆದು, ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸದೇ ಇರುವುದರಿಂದ ಪ್ರತಿ ಮಾಹೆಯು ನಿಗಧಿತ ಶುಲ್ಕದ ಬಿಲ್‌ಗಳು ಬರುತ್ತಿದ್ದು, ಇಲಾಖೆಗೆ ಹೆಚ್ಚಿನ ಹೊರೆಯಾಗುತ್ತಿದೆ. ಫೆಬ್ರವರಿ-2023ರ ಮಾಹೆಯ ವರೆಗಿನ ವಿದ್ಯುತ್ ಬಿಲ್ಲುಗಳನ್ನು ಈಗಾಗಲೇ ಪಾವತಿಗಾಗಿ ತಮ್ಮ ಕಛೇರಿಗೆ ಸಲ್ಲಿಸಲಾಗಿದೆ. ಪ್ರಸ್ತುತ ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ಉಪ ವಿಭಾಗ, ಚಾ.ವಿ.ಸ.ನಿ.ನಿ., ಕುಶಾಲನಗರ ಇವರು ಉಲ್ಲೇಖ(2)ರ ಪತ್ರದಲ್ಲಿ ಆರ್.ಆರ್.ನಂ. 154 ಮತ್ತು 155 ಗಳ ಒಟ್ಟು ಬಾಕಿ ಮೊತ್ತ ರೂ.99,231.00 ಗಳನ್ನು 15 ದಿನಗಳೊಳಗಾಗಿ ಪಾವತಿಸುವಂತೆ ತಿಳಿಸಿರುತ್ತಾರೆ. ಆದ್ದರಿಂದ ಸದರಿ ಆರ್.ಆರ್.ನಂ. 154 ಮತ್ತು 155 ಗಳ ಈವರೆಗೆ ಬಾಕಿ ಇರುವ ಬಿಲ್ಲಿನ ಸಂಪೂರ್ಣ ಮೊತ್ತವನ್ನು ಶೀಘ್ರವಾಗಿ ಪಾವತಿಸಬೇಕೆಂದು ಈ ಮೂಲಕ ತಮ್ಮಲ್ಲಿ ಕೋರಲಾಗಿದೆ.

**ಅಡಕ:** ಉಲ್ಲೇಖ(2) ಪತ್ರ

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ
ಉಪ ವಿಭಾಗ, ಮಡಿಕೇರಿ.

ಪ್ರತಿಯನ್ನು: ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ಉಪ ವಿಭಾಗ, ಚಾ.ವಿ.ಸ.ನಿ.ನಿ., ಕುಶಾಲನಗರ ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

KNIP 154, KNIP155.
To Permanent Dis,
28/3/23